## ದಿನಾಂಕ:29-05-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು.

**ವಿಷಯದ ಸಂಖ್ಯೆ:20/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಹೆಬ್ಬಾಳ ಕಣಿವೆ ಪಾಕೇಜ್–3 ರ ಪರಿಮಿತಿಯ ಉಪನೀರುಗಾಲುವೆ ಹೆಚ್–306 ಚೈನೇಜ್:350 ರಿಂದ ಚೈ:1100 ರವರೆಗೆ ನವೀಕರಣ ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2008–09 ನೇ ಸಾಲಿನ ರೂ.465.00 ಗಳಿಗೆ ತಯಾರಿಸಲಾಗಿದ್ದು, ಸದರಿ ಕಾಮಗಾರಿ ಆಡಳಿತಾತ್ಮಕ ಅನುಮೋದನೆ ಹಾಗೂ ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ.

ಹೆಬ್ಬಾಳ ಕಣಿವೆ ಪ್ಯಾಕೇಜ್–3 ರಲ್ಲಿ ಹೆಚ್–306 ಮೂಲ ಅಭಿವೃದ್ಧಿಗಾಗಿ ಪ್ಯಾಕೇಜ್ ಕಾಮಗಾರಿಯನ್ನು ಮೆ॥ ಜಿ.ವಿ.ಪಿ.ಆರ್ ಸಂಸ್ಥೆಗೆ ಟೆಂಡರ್ ಮೊತ್ತ ರೂ.3967.81 ಲಕ್ಷಗಳಿಗೆ ದಿ:23/03/2006 ರಂದು ವಹಿಸಲಾಗಿತ್ತು. ಆದರೆ, ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಿರುವುದಿಲ್ಲ. ಇದರಿಂದಾಗಿ, ಈ ಕಣಿವೆಯ ಚೈ:350.00 ರಿಂದ ಚೈ:1100 ರವರೆಗೆ ವಾಸಿಸುವ ನಾಗರೀಕರಿಗೆ ತೊಂದರೆ ಉಂಟಾಗಿದ್ದು, ಕಾಮಗಾರಿಯು ಅತ್ಯವಶ್ಯಕವಾಗಿರುತ್ತದೆ. ಆದ್ದರಿಂದ, ಕಾಮಗಾರಿಯನ್ನು ಮೂಲ ಗುತ್ತಿಗೆದಾರರಿಂದ ಹೊರ ತೆಗೆದು, ಅವರ Risk and Cost ನಲ್ಲಿ ಕಾಮಗಾರಿಯನ್ನು ಹೆಚ್ಚುವರಿಯಾಗಿ ನಿರ್ವಹಿಸಬೇಕಾಗಿರುವುದರಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದು ಕಾಮಗಾರಿ ಸಂಖ್ಯೆಯನ್ನು ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಗೆ ಟೆಂಡರ್ ಅನ್ನು ಕರೆಯಲಾಗಿದ್ದು, ಇದರಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿ ಅರ್ಹರಾಗಿರುತ್ತಾರೆ. ಅದರಂತೆ, ಸದರಿಯವರುಗಳ ಆರ್ಥಿಕ ಬಿಡ್ಡನ್ನು ತೆರೆಯಲಾಗಿ, ಇದರಲ್ಲಿ ಕಡಿಮೆ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ.ಕೆ.ದಾಮೋದರ್ ರವರು ನಮೂದಿಸಿರುವ ದರಗಳನ್ನು 2008–09ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ:31.85 ರಷ್ಟು ಹೆಚ್ಚಿಗೆ ಇರುತ್ತದೆ. ತದರನ್ವಯ, ಗುತ್ತಿಗೆದಾರರೊಂದಿಗೆ ಸಂಧಾನ ಹಾಗೂ ಮರು ಸಂಧಾನ ನಡೆಸಲಾಗಿ, ಗುತ್ತಿಗೆದಾರರು:2008–09ನೇ ಸಾಲಿನ ದರಪಟ್ಟಿಗೆ ಶೇ:13.50 ರಷ್ಟು ಹೆಚ್ಚುವರಿಗೆ ಕಾಮಗಾರಿ ನಿರ್ವಹಿಸುವುದಾಗಿ ಒಪ್ಪಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯು ತುರ್ತು ಕಾಮಗಾರಿಯಾಗಿರುವ ಹಿನ್ನಲೆಯಲ್ಲಿ, ಕಾಮಗಾರಿಗೆ ಕನಿಷ್ಠ ದರಗಳನ್ನು ನಮೂದಿಸಿರುವ ಶ್ರೀ.ಕೆ.ದಾಮೋದರ್ ರವರಿಗೆ ನಿರ್ವಹಿಸಲು ವಹಿಸಿರುವ ಕ್ರಮಕ್ಕೆ ಸ್ಥಿರೀಕರಣ ಹಾಗೂ ಸದರಿ ಕಾಮಗಾರಿಯ ಟೆಂಡರ್ ಮೊತ್ತ ಶೇ:13.50 ರ ಹೆಚ್ಚುವರಿಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05–05–2010 ರ ಟಿಪ್ಪಣಿ.

ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಸತ್ಯನಾರಾಯಣರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು

ನಿರ್ಣಯ:– ದಿನಾಂಕ: 05–05–2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದು.

ಶ್ರೀ ಬಿ.ಎಸ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಶ್ರೀ ಪಿ.ಎನ್. ಸದಾಶಿವರವರು ಅನುಮೋದಿಸಿದರು

ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ಸಭೆಯು ಬಹುಮತದಿಂದ ಒಪ್ಪಿದೆ ಎಂದು ತೀರ್ಮಾನಿಸಿತು.

ನಿರ್ಣಯ:– ದಿನಾಂಕ: 05–05–2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

ಎಸ್.ಕೆ.ನಟರಾಜ

(ಎಸ್. ಕೆ. ನಟರಾಜು)

ಮಹಾಪೌರರು